## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2013-14ನೇ ಸಾಲಿನಲ್ಲಿ ರಾಜೀವ್ ಗಾಂಧಿ ಚೈತನ್ಯ ಯೋಜನೆಗೆ – ಅನುದಾನ ಬಿಡುಗಡೆ ಕುರಿತು.

ಓದಲಾಗಿದೆ:

1. ಮಾನ್ಯ ಮುಖ್ಯಮಂತ್ರಿಯವರ ಆಯವ್ಯಯ ಭಾಷಣ ದಿನಾಂಕ: 12.07.2013.
2. ಆರ್ಥಿಕ ಇಲಾಖೆಯ ಸಹಮತಿ ಸಂಖ್ಯೆ 334 ವೆಚ್ಚ 6/2013 ದಿನಾಂಕ 12-11-2013.
3. ಸರ್ಕಾರದ ಆದೇಶ ಸಮಸಂಖ್ಯೆ ದಿನಾಂಕ: 21-11-2013.
4. ಆರ್ಥಿಕ ಇಲಾಖೆಯ ಪತ್ರ ಸಂಖ್ಯೆ : ಆಇ 01 ಬಿಎಸ್‌ಜಿ 2013 ದಿನಾಂಕ 26-12-2013.
5. ಆರ್ಥಿಕ ಇಲಾಖೆಯ ಸಹಮತಿ ಸಂಖ್ಯೆ 334 ವೆಚ್ಚ 6/2013 ದಿನಾಂಕ 13-02-2014.

****

**ಪ್ರಸ್ತಾವನೆ:**

ಮಾನ್ಯ ಮುಖ್ಯಮಂತ್ರಿಗಳು ದಿನಾಂಕ 12.07.2013 ರ ಆಯವ್ಯಯ ಭಾಷಣದಲ್ಲಿ ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 40 ಯುವಜನರಂತೆ 2 ಲಕ್ಷ ಗ್ರಾಮೀಣ ನಿರುದ್ಯೋಗಿ ಯುವಜನರಿಗೆ ಉದ್ಯೋಗಾವಕಾಶವನ್ನು ಸೃಷ್ಟಿಸುವ ಸಲುವಾಗಿ ರಾಜೀವ್ ಗಾಂಧಿ ಚೈತನ್ಯ ಯೋಜನೆಯನ್ನು 2013-14ನೇ ಸಾಲಿನಿಂದ ಪ್ರಾರಂಭಿಸುವುದಾಗಿ ಘೋಷಿಸಿರುತ್ತಾರೆ. 2013-14ನೇ ಸಾಲಿನಲ್ಲಿ ರಾಜೀವ್ ಗಾಂಧಿ ಚೈತನ್ಯ ಯೋಜನೆಯಡಿ 2 ಲಕ್ಷ ಗ್ರಾಮೀಣ ಯುವ ಜನತೆಗೆ ಸ್ವ-ಉದ್ಯೋಗ / ವೃತ್ತಿ ಪರ ಕೌಶಲ್ಯ ಉದ್ಯೋಗ ಒದಗಿಸಲು ಉದ್ದೇಶಿಸಲಾಗಿದೆ. ಓದಲಾಗಿದೆ (2) ರಲ್ಲಿ ಆರ್ಥಿಕ ಇಲಾಖೆಯು ಲೆಕ್ಕ ಶೀರ್ಷಿಕೆ 2501-00-101-0-05 (2501-01-198-6-01) ಯೋಜನೆಯಡಿ ರೂ.105.00 ಕೋಟಿಗಳನ್ನು (ರೂ.ನೂರಾ ಐದು ಕೋಟಿಗಳು ಮಾತ್ರ) ಪೂರಕ ಅಂದಾಜು-1 ರಲ್ಲಿ ಒದಗಿಸಲು ಸಹಮತಿಸಿದೆ. ಅದರಂತೆ, ಓದಲಾಗಿದೆ (3) ರ ಸರ್ಕಾರಿ ಆದೇಶದಲ್ಲಿ ಮಂಜೂರಾತಿ ನೀಡಲಾಗಿದೆ.

ಓದಲಾಗಿದೆ (4) ರಲ್ಲಿ ಆರ್ಥಿಕ ಇಲಾಖೆಯು ಲೆಕ್ಕ ಶೀರ್ಷಿಕೆ 2501-00-101-0-05 (2501-01-198-6-01) ರಲ್ಲಿ ಒಟ್ಟಾರೆಯಾಗಿ ರೂ.134.35 ಕೋಟಿಗಳನ್ನು 2013-14ನೇ ಸಾಲಿನ ಪೂರಕ ಅಂದಾಜಿನಲ್ಲಿ (ಮೊದಲನೇ ಕಂತು) ಒದಗಿಸಿದೆ.

ರಾಜೀವ್‌ಗಾಂಧಿ ಯೋಜನೆಯಡಿ ಪ್ರೇರಣಾ ಕಾರ್ಯಕ್ರಮಕ್ಕಾಗಿ ರೂ.5.70 ಕೋಟಿ, ರಾಜ್ಯ ಮಟ್ಟದಲ್ಲಿನ ಆಡಳಿತಾತ್ಮಕ ವೆಚ್ಚಕ್ಕಾಗಿ ರೂ.0.30 ಕೋಟಿ ಹಾಗೂ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ ರಾಜೀವ್‌ಗಾಂಧಿ ಚೈತನ್ಯ ಯೋಜನೆಯಡಿ ತಗಲುವ ಆಡಳಿತಾತ್ಮಕ ವೆಚ್ಚ, ಸ್ವ-ಉದ್ಯೋಗ ಆಯ್ಕೆ ಮಾಡಿಕೊಳ್ಳುವ ಫಲಾನುಭವಿಗಳು ಬ್ಯಾಂಕುಗಳಿಂದ ತೆಗೆದುಕೊಂಡ ಸಾಲಕ್ಕೆ ನೀಡಬೇಕಾಗಿರುವ ಸಹಾಯಧನ ಮತ್ತು ಯೋಜನಾ ಬೆಂಬಲ ಸಂಸ್ಥೆ/ಯೋಜನಾ ಅನುಷ್ಠಾನ ಸಂಸ್ಥೆಗಳಿಗೆ ನೀಡುವ ಅನುದಾನಕ್ಕಾಗಿ ಪ್ರತಿ ತಾಲ್ಲೂಕಿಗೆ ರೂ.25.00 ಲಕ್ಷದಂತೆ ರಾಜ್ಯದಲ್ಲಿನ 176 ತಾಲ್ಲೂಕುಗಳಿಗೆ ರೂ.44.00 ಕೋಟಿಗಳನ್ನು ಒಟ್ಟಾರೆಯಾಗಿ ರೂ.50.00 ಕೋಟಿಗಳನ್ನು ಬಿಡುಗಡೆ ಮಾಡಲು ಆರ್ಥಿಕ ಇಲಾಖೆಯನ್ನು ಕೋರಲಾಗಿತ್ತು. ಓದಲಾಗಿದೆ (5) ರಲ್ಲಿ ಆರ್ಥಿಕ ಇಲಾಖೆಯು ಲೆಕ್ಕ ಶೀರ್ಷಿಕೆ 2501-00-101-0-05 (2501-01-198-6-01) ಯೋಜನೆಯಡಿ ರೂ.50.00 ಕೋಟಿಗಳನ್ನು (ರೂ.ಐವತ್ತು ಕೋಟಿಗಳು ಮಾತ್ರ) ಬಿಡುಗಡೆ ಮಾಡಲು ಸಹಮತಿಸಿದೆ.

ರಾಜೀವ್‌ಗಾಂಧಿ ಚೈತನ್ಯ ಯೋಜನೆಯಡಿ ಬಿಡುಗಡೆ ಮಾಡುವ ರೂ.50.00 ಕೋಟಿಗಳ ಪೈಕಿ ರೂ.6.00 ಕೋಟಿ (ರೂ.ಆರು ಕೋಟಿ ಮಾತ್ರ) ಕೆಎಸ್‌ಆರ್‌ಎಲ್‌ಪಿಎಸ್, ಬೆಂಗಳೂರು ಹಾಗೂ ಉಳಿದ

....... ಅನುದಾನಗಳನ್ನು (ರೂ.ನಲವತ್ತನಾಲ್ಕು ಕೋಟಿ) ರಾಜ್ಯದ ಎಲ್ಲಾ 30 ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಬೇಕಾಗಿದೆ. ಆದುದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ಕೆಎಸ್ಆರ್ಎಲ್ಪಿಎಸ್ 107 ಎಸ್ಪಿಎಂ 2013-14, ಬೆಂಗಳೂರು**

**ದಿನಾಂಕ : 28-02-2014**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, "ರಾಜೀವ್ ಗಾಂಧಿ ಚೈತನ್ಯ ಯೋಜನೆ" ಗಾಗಿ ಅನುಬಂಧ-1 ತೋರಿಸಿರುವಂತೆ ರೂ.50,00,00,000/- (ರೂ.ಐವತ್ತು ಕೋಟಿ ಮಾತ್ರ) ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಷರತ್ತುಗಳು:

- ಸರ್ಕಾರ ಬಿಡುಗಡೆ ಮಾಡಿರುವ ರಾಜ್ಯ ಅನುದಾನವನ್ನು ಪ್ರಧಾನ ಲೆಕ್ಕ ಶೀರ್ಷಿಕೆ 2501 ಗ್ರಾಮೀಣಾಭಿವೃದ್ಧಿಗಾಗಿ ವಿಶೇಷ ಕಾರ್ಯಕ್ರಮಗಳು 01 ಸಮಗ್ರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು-198 ಗ್ರಾಮ ಪಂಚಾಯತಿಗಳಿಗೆ ಸಹಾಯ-6 ಗ್ರಾಮ ಪಂಚಾಯತಿಗಳು-01-ಬ್ಲಾಕ್ ಅನುದಾನ ಕೇಂದ್ರ ಪುರಸ್ಕೃತ ಯೋಜನೆ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (ಎನ್ಆರ್ಎಲ್ಎಂ) 2013-14 (2501-01-198-6-01) (ಹೊಸ ಕೋಡ್ 2501-00-101-0-05) ರಡಿ ಭರಿಸುವುದು.
- ಕೆಎಸ್ಆರ್ಸಿಪಿಎಸ್ ಗೆ ಬಿಡುಗಡೆ ಮಾಡಿರುವ ಅನುದಾನವನ್ನು ಡ್ರಾ ಮಾಡಲು, ಅಪರ ಅಭಿಯಾನ ನಿರ್ದೇಶಕರು, ಕೆಎಸ್ಆರ್ಎಲ್ಪಿಎಸ್, ಬೆಂಗಳೂರು ಇವರು ರುಜು ಮಾಡಿದ ಸ್ವೀಕರ್ತನ ರಸೀತಿ (payees receipt) ನ್ನು ಸರ್ಕಾರ ಮೇಲು ರುಜುವಿಗಾಗಿ ಸಲ್ಲಿಸುವುದು. ನಂತರ ಸ್ವೀಕರ್ತನ ರಸೀತಿ (payees receipt) ಗೆ ನಿರ್ದೇಶಕರು (ಇ_ಆಡಳಿತ) ಮತ್ತು (ಸ್ವಉಕಾ) ಹಾಗೂ ಪ.ನಿ ಸರ್ಕಾರದ ಉಪ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರು ಮೇಲು ರುಜು ಮಾಡುವುದು. ಉಪ ನಿರ್ದೇಶಕರು (ಸ್ವಉಕಾ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಬೆಂಗಳೂರು, ಇವರು ಅನುದಾನವನ್ನು ಅಭಿಯಾನ ನಿರ್ದೇಶಕರು, ಕೆಎಸ್ಆರ್ಎಲ್ಪಿಎಸ್, ಬೆಂಗಳೂರು ಇವರ ಹೆಸರಿನಲ್ಲಿ ರಾಜ್ಯ ಹುಜುರ್ ಖಜಾನೆಯಿಂದ ಸೆಳೆಯುವುದು. ಕೆಎಸ್ಆರ್ಎಲ್ಪಿಎಸ್ ಕಾರ್ಯಕಮದ ಅನುಷ್ಠಾನಕ್ಕಾಗಿ ತೆರೆದಿರುವ ಬ್ಯಾಂಕ್ ಖಾತೆಗೆ ಜಮೆ ಮಾಡಿಕೊಂಡು ವೆಚ್ಚವನ್ನು ಭರಿಸತಕ್ಕದ್ದು.
- ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಿದ ಅನುದಾನವನ್ನು ಸ್ವೀಕರ್ತನ ರಸೀತಿ (ಪೇಯಿಸ್ ರಸೀದಿ) ಯ ಮೂಲಕ ಜಿಲ್ಲಾ ಪಂಚಾಯತಿ ನಿಧಿಯಿಂದ ಅನುದಾನವನ್ನು ಖಜಾನೆಯಿಂದ ಪಡೆದುಕೊಂಡು ಕಾರ್ಯಕಮದ ಅನುಷ್ಠಾನಕ್ಕಾಗಿ ತೆರೆದಿರುವ ಬ್ಯಾಂಕ್ ಖಾತೆಗೆ ಜಮೆ ಮಾಡಿಕೊಂಡು ವೆಚ್ಚವನ್ನು ಭರಿಸತಕ್ಕದ್ದು.
- ರಾಜೀವ್‌ಗಾಂಧಿ ಚೈತನ್ಯ ಯೋಜನೆಗಾಗಿ ಬಿಡುಗಡೆ ಮಾಡಿದ ಅನುದಾನವನ್ನು ಪ್ರತ್ಯೇಕವಾಗಿ ತೆರೆದಿರುವ ಬ್ಯಾಂಕ್ ಖಾತೆಗೆ ಜಮೆ ಮಾಡಿ ಲೆಕ್ಕಪತ್ರ ನಿರ್ವಹಿಸತಕ್ಕದ್ದು.
- **ಈ ಯೋಜನೆಯಡಿ ಬಿಡುಗಡೆ ಮಾಡಿದ ಅನುದಾವನ್ನು ರಾಜೀವ್‌ಗಾಂಧಿ ಚೈತನ್ಯ ಯೋಜನೆ ಅನುಷ್ಠಾನಕ್ಕಾಗಿ ಮಾತ್ರ ಉಪಯೋಗಿಸತಕ್ಕದ್ದು.**
- **ಕೆಎಸ್ಆರ್ಎಲ್ಪಿಎಸ್, ಬೆಂಗಳೂರು ಇವರು ಅಗ್ಗಿಂದಾಗ್ಗೆ ನೀಡುವ ಸೂಚನೆ ಮೇರೆಗೆ ಅನುದಾವನ್ನು ವೆಚ್ಚ ಮಾಡತಕ್ಕದ್ದು.**
- ಜಿಲ್ಲಾ ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳಿಗೆ ಅನುದಾನವನ್ನು ಖಜಾನೆಯಿಂದ ಸೆಳೆಯಲು ಕಾನೂನು ರೀತ್ಯ ಅಧಿಕಾರ ನೀಡಲಾಗಿದೆ.
- ಈ ಆದೇಶದಲ್ಲಿ ಬಿಡುಗಡೆ ಮಾಡಿದ ಅನುದಾನದ ಆಂತರಿಕ ಲೆಕ್ಕ ಪರಿಶೋಧನೆಯನ್ನು ಕೆಎಸ್ಆರ್ಎಲ್ಪಿಎಸ್, ಬೆಂಗಳೂರು ಮಾಡುವುದು.

- ಜಿಲ್ಲಾ ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳು, ಆಯಾ ತಿಂಗಳ ಪ್ರಗತಿ ವರದಿಯನ್ನು ಮುಂದಿನ ತಿಂಗಳ 5 ನೇ ತಾರೀಖಿನೊಳಗೆ ಅಭಿಯಾನ ನಿರ್ದೇಶಕರು, ಸಂಜೀವಿನಿ, ಕೆಎಸ್‌ಆರ್‌ಎಲ್‌ಪಿಎಸ್, ಬೆಂಗಳೂರು ರವರಿಗೆ ಕಳುಹಿಸುವುದು.
- ಮುಖ್ಯ ಲೆಕ್ಕಾಧಿಕಾರಿಗಳು ಹಣ ಉಪಯೋಗ ಪ್ರಮಾಣ ಪತ್ರ ಹಾಗೂ ಲೆಕ್ಕ ಪರಿಶೋಧನಾ ವರದಿಗಳನ್ನು ಕೆಎಸ್‌ಆರ್‌ಎಲ್‌ಪಿಎಸ್, ಬೆಂಗಳೂರು ಇವರಿಗೆ ತಪ್ಪದೇ ಕಳುಹಿಸುವುದು.
- ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಅಇ 334/ವೆಚ್ಚ-6/2013 ಆರ್ಥಿಕ ಇಲಾಖೆ (ವೆಚ್ಚ-6) ದಿನಾಂಕ: 13-02-2014 ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ

(ರೋಹಿಣಿ ಸಿಂಧೂರಿ)
ನಿರ್ದೇಶಕರು (ಇ-ಆಡಳಿತ) ಮತ್ತು (ಸ್ವಉಕಾ) ಹಾಗೂ
ಪ.ನಿ. ಸರ್ಕಾರದ ಉಪ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ: ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ ಇವರಿಗೆ ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸಲು ಕೋರಲಾಗಿದೆ. (ಎರಡು ಪ್ರತಿಗಳು)
ಪ್ರತಿಯನ್ನು:

1) ಪ್ರಧಾನ ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ಅಭಿಯಾನ ನಿರ್ದೇಶಕರು, ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್, ಐ-145 ಹೋಟೆಲ್, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು
3) ಅಪರ ಅಭಿಯಾನ ನಿರ್ದೇಶಕರು, ಸಂಜೀವಿನಿ – ಕೆಎಸ್‌ಆರ್‌ಎಲ್‌ಪಿಎಸ್, ಐ-145 ಹೋಟೆಲ್, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು
4) ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಅಧ್ಯಕ್ಷರುಗಳಿಗೆ.
5) ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ
6) ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳಿಗೆ.
7) ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಯೋಜನಾ ನಿರ್ದೇಶಕರು (ಡಿಆರ್‌ಡಿಎ)
8) ನಿರ್ದೇಶಕರು, ಖಜಾನೆ ಇಲಾಖೆ, ಪೋಡಿಯಂ ಬ್ಲಾಕ್, ವಿ.ವಿ. ಟವರ್, ಬೆಂಗಳೂರು-560001.
9) ಉಪ ನಿರ್ದೇಶಕರು, ಖಜಾನೆ ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ನಂ.49, 2ನೇ ಮಹಡಿ, ಖನಿಜ ಭವನ (ಸರ್ಕಾರಿ ಬ್ಲಾಕ್) ರೇಸ್ ಕೋರ್ಸ್ ರಸ್ತೆ ಬೆಂಗಳೂರು.
10) ಉಪ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
11) ರಾಜ್ಯದ ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
12) ರಾಜ್ಯ ಯೋಜನಾ ವ್ಯವಸ್ಥಾಪಕರು (ಹಣಕಾಸು), ಸಂಜೀವಿನಿ, ಕೆಎಸ್‌ಆರ್‌ಎಲ್‌ಪಿಎಸ್, ಬೆಂಗಳೂರು ರವರಿಗೆ ಮುಂದಿನ ಕ್ರಮಕ್ಕಾಗಿ
13) ಉಪ ನಿರ್ದೇಶಕರು (ಸ್ವಉಕಾ), ಗ್ರಾಅಪಂರಾ ಇಲಾಖೆ.
14) ಸನ್ಮಾನ್ಯ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳಿಗೆ
15) ಸನ್ಮಾನ್ಯ ಗ್ರಾಅಪಂರಾ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ
16) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿ ಕಟ್ಟಡ, ಬೆಂಗಳೂರು.
17) ಸರ್ಕಾರದ ಕಾರ್ಯದರ್ಶಿಗಳು (ವೆಚ್ಚ), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು ಇವರ ಆಪ್ತ ಕಾರ್ಯದರ್ಶಿಗಳಿಗೆ.
18) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಸರ್ಕಾರದ ಕಾರ್ಯದರ್ಶಿಗಳು, (ಪಂ.ರಾಜ್), ಗ್ರಾಅಪಂರಾ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳಿಗೆ.
19) ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಅಪಂರಾ ಇಲಾಖೆ ಇವರ ಆಪ್ತ ಸಹಾಯಕರಿಗೆ.
20) ನಿರ್ದೇಶಕರು (ಇ-ಆಡಳಿತ) ಮತ್ತು (ಸ್ವಉಕಾ) ಹಾಗೂ ಪ.ನಿ. ಸರ್ಕಾರದ ಉಪ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಸಹಾಯಕರು
21) ಮುಖ್ಯ ಸಂಪಾದಕರು, ಕರ್ನಾಟಕ ವಿಕಾಸ, ಗ್ರಾಅಪಂರಾ ಇಲಾಖೆ, ಬೆಂಗಳೂರು.
22) ಶಾಖಾಧಿಕಾರಿ, ಪತ್ರ ಸ್ವೀಕಾರ ಮತ್ತು ರವಾನೆ ಶಾಖೆ, ಗ್ರಾಅಪಂರಾ ಇಲಾಖೆ.
23) ಗಣಕ ಕೋಶ, ಗ್ರಾಅಪಂರಾ ಇಲಾಖೆ, ಮುಂದಿನ ಕ್ರಮಕ್ಕಾಗಿ
24) ಹೆಚ್ಚಿನ ಪ್ರತಿ.

## ಅನುಬಂಧ – 1

**ಸರ್ಕಾರದ ಆದೇಶ ಸಂಖ್ಯೆ : ಕೆಎಸ್‌ಆರ್‌ಎಲ್‌ಪಿಎಸ್ 107 ಎಸ್‌ಪಿಎಂ 2013–14, ಬೆಂಗಳೂರು**

**ದಿನಾಂಕ : 28–02–2014 ಕ್ಕೆ ಅನುಬಂಧ**

(ರೂ.ಗಳಲ್ಲಿ)

| ಕ್ರ.ಸಂ | ಸಂಸ್ಥೆಯ ಹೆಸರು | ಒಟ್ಟು ಜಿಲ್ಲಾ ಪರಿಷದ್ (lumpsum-ZP) | ಡಿ.ಡಿ.ಒ ಕೋಡ್ | | ಮೊತ್ತ |
|---|---|---|---|---|---|
| I. | ಕೆಎಸ್‌ಆರ್‌ಎಲ್‌ಪಿಎಸ್, ಬೆಂಗಳೂರು | 300 | 0200RP0005 | | 6,00,00,000 |
| II. | ಜಿಲ್ಲಾ ಪಂಚಾಯತಿಗಳಿಗೆ | | | | |
| ಕ್ರ ಸಂ | ಜಿಲ್ಲಾ ಪಂಚಾಯತಿಯ ಹೆಸರು | ಒಟ್ಟು ಜಿಲ್ಲಾ ಪರಿಷದ್ (lumpsum-ZP) | ಡಿ.ಡಿ.ಒ ಕೋಡ್ | ತಾಲ್ಲೂಕು ಸಂಖ್ಯೆ | ರಾಜೀವ್‌ಗಾಂಧಿ ಯೋಜನೆಯಡಿ ಪ್ರತಿ ತಾಲ್ಲೂಕಿಗೆ ರೂ.25,00,000 ಬಿಡುಗಡೆ ಗೊಳಿಸುತ್ತಿರುವ ರಾಜ್ಯದ ಅನುದಾನ |
| 1 | ಬಾಗಲಕೋಟೆ | 300 | 2900ZZ0001 | 6 | 1,50,00,000 |
| 2 | ಬೆಂಗಳೂರು ನಗರ | 300 | 0100ZZ8001 | 4 | 1,00,00,000 |
| 3 | ಬೆಂಗಳೂರು ಗ್ರಾ | 300 | 0300ZZ8001 | 4 | 1,00,00,000 |
| 4 | ಬೆಳಗಾಂ | 300 | 2200ZZ0002 | 10 | 2,50,00,000 |
| 5 | ಬಳ್ಳಾರಿ | 300 | 3400ZZ0001 | 7 | 1,75,00,000 |
| 6 | ಬೀದರ್ | 300 | 3800ZZ5701 | 5 | 1,25,00,000 |
| 7 | ಬಿಜಾಪುರ | 300 | 2800ZZ9152 | 5 | 1,25,00,000 |
| 8 | ಚಾಮರಾಜನಗರ | 300 | 1000ZZ0001 | 4 | 1,00,00,000 |
| 9 | ಚಿಕ್ಕಬಳ್ಳಾಪುರ | 300 | 0600ZZ0001 | 6 | 1,50,00,000 |
| 10 | ಚಿಕ್ಕಮಗಳೂರು | 300 | 1800ZZ0017 | 7 | 1,75,00,000 |
| 11 | ಚಿತ್ರದುರ್ಗ | 300 | 1600ZZ0001 | 6 | 1,50,00,000 |
| 12 | ದಕ್ಷಿಣ ಕನ್ನಡ | 300 | 1900ZZ0047 | 5 | 1,25,00,000 |
| 13 | ದಾವಣಗೆರೆ | 300 | 1700ZZ0002 | 6 | 1,50,00,000 |
| 14 | ಧಾರವಾಡ | 300 | 2500ZZ8798 | 5 | 1,25,00,000 |
| 15 | ಗದಗ | 300 | 2600ZZ0001 | 5 | 1,25,00,000 |
| 16 | ಗುಲ್ಬರ್ಗಾ | 300 | 3200ZZ0003 | 7 | 1,75,00,000 |
| 17 | ಹಾಸನ | 300 | 1300ZZ0003 | 8 | 2,00,00,000 |
| 18 | ಹಾವೇರಿ | 300 | 2700ZZ0001 | 7 | 1,75,00,000 |
| 19 | ಕೊಡಗು | 300 | 1200ZZ0001 | 3 | 75,00,000 |
| 20 | ಕೋಲಾರ | 300 | 0700ZZ8002 | 5 | 1,25,00,000 |
| 21 | ಕೊಪ್ಪಳ | 300 | 1500ZZ0010 | 4 | 1,00,00,000 |
| 22 | ಮಂಡ್ಯ | 300 | 1100ZZ0001 | 7 | 1,75,00,000 |
| 23 | ಮೈಸೂರು | 300 | 0900ZZ0001 | 7 | 1,75,00,000 |
| 24 | ರಾಯಚೂರು | 300 | 3600ZZ0001 | 5 | 1,25,00,000 |
| 25 | ರಾಮನಗರ | 300 | 0400ZZ0001 | 4 | 1,00,00,000 |
| 26 | ಶಿವಮೊಗ್ಗ | 300 | 1400ZZ0002 | 7 | 1,75,00,000 |
| 27 | ತುಮಕೂರು | 300 | 0800ZZ0001 | 10 | 2,50,00,000 |
| 28 | ಉಡುಪಿ | 300 | 2000ZZ0001 | 3 | 75,00,000 |
| 29 | ಉತ್ತರ ಕನ್ನಡ | 300 | 3000ZZ0080 | 11 | 2,75,00,000 |
| 30 | ಯಾದಗಿರಿ | 300 | 3300ZZ0001 | 3 | 75,00,000 |
| | ಒಟ್ಟು | | | 176 | 44,00,00,000 |
| | | | ಎಲ್ಲಾ ಒಟ್ಟು ರೂ. | | 50,00,00,000 |

(ರೋಹಿಣಿ ಸಿಂಧೂರಿ)
ನಿರ್ದೇಶಕರು (ಇ–ಆಡಳಿತ) ಮತ್ತು (ಸ್ವಉಕಾ) ಹಾಗೂ
ಪ.ನಿ. ಸರ್ಕಾರದ ಉಪ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ